C.C.No.1636/2025
PW-1

<u>ದಿನಾಂಕಃ 18-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>
<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ನಾನು Second year BA ಓದಿರುತ್ತೇನೆ. ನಾನು ಟೈಲರಿಂಗ್ ಕೆಲಸ ಹಾಗೂ ಬ್ಯಾಗ್ ಹೊಲಿದು ಬೇರೆಯವರಿಗೆ ಮಾರಾಟ ಮಾಡುತ್ತೇನೆ. ನನ್ನ ಬಳಿ ಬಿ.ಪಿ.ಎಲ್ ಕಾರ್ಡ್ ಇರುತ್ತದೆ. ವಾರ್ಷಿಕ ರೂ.1,20,000/- ಆದಾಯಕ್ಕಿಂತ ಕಡಿಮೆ ಇರುವವರು ಮಾತ್ರ ಬಿ.ಪಿ.ಎಲ್ ಕಾರ್ಡ್ ಮಾಡುತ್ತಾರೆ ಎಂದರೆ ಸರಿ. ನನೆ ವಾರ್ಷಿಕ ರೂ.1,20,000/- ಕ್ಕಿಂತ ಕಡಿಮೆ ಆದಾಯ ಇದ್ದುದರಿಂದ ನಾನು ಬಿ.ಪಿ.ಎಲ್ ಕಾರ್ಡ್ ಮಾಡಿರುತ್ತೇನೆ ಎಂದರೆ ಸರಿ. ನಾನು, ಆರೋಪಿ, ಜಮೀಲಾ, ತಮನ್ನಾ ಹಾಗೂ ಸಮೀನಾ ಹಾಗೂ ಇತರರು ಒಟ್ಟು ಸೇರಿ ಚೀಟಿ ವ್ಯವಹಾರ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ನನ್ನ ಕೈಗೆ ಹೇಗೆ ಬಂತು ಎನ್ನುವ ವಿಚಾರವನ್ನು ಮರೆ ಮಾಚುವ ಸಲುವಾಗಿ ಚೀಟಿ ವ್ಯವಹಾರ ಮಾಡುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾರ್ಷಿಕ ರೂ.1,20,000/- ಆದಾಯವು ನನ್ನ ಖರ್ಚು ವೆಚ್ಚಕ್ಕೆ ಸರಿಯಾಗುತ್ತಿದ್ದು ಏನೂ ಉಳಿಯುವುದಿಲ್ಲ ಎಂದರೆ ಸರಿ.

ನನಗೆ ಚಿಕ್ಕಮಗಳೂರಿನ ಎಸ್.ಬಿ.ಐ ಶಾಖೆಯಲ್ಲಿ ಬ್ಯಾಂಕ್ ಖಾತೆ ಇರುತ್ತದೆ. ನಾನು ರೂ.2,25,000/- ವನ್ನು ನನ್ನ ಅಕ್ಕನಿಂದ ತೆಗೆದುಕೊಂಡಿದ್ದೆನು ಹಾಗೂ ರೂ.2,00,000/- ಹಣ ಮನೆ ಭೋಗ್ಯಕ್ಕೆ ಹಾಕಿದ ಹಣ ಹಾಗೂ ರೂ.75,000/- ನನ್ನಲ್ಲಿ ನಗದು ಇತ್ತು. ಇಲ್ಲಿಯವರೆಗೂ ಈ ವಿಚಾರವನ್ನು ನಾನು ಎಲ್ಲಿಯೂ ತಿಳಿಸಿರುವುದಿಲ್ಲ ಹಾಗೂ ಇದೇ ಮೊದಲಬಾರಿಗೆ ನ್ಯಾಯಾಲಯದ ಮುಂದೆ ತಿಳಿಸುತ್ತಿದ್ದೇನೆ

ಎಂದರೆ ಸರಿ. ಈ ವಿಚಾರವನ್ನು ನೋಟೀಸ್ ಕಳುಹಿಸುವ ಸಮಯದಲ್ಲಿ ತಿಳಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿದಾರರು ತೊಂದರೆ ಇರಲಿಲ್ಲ. ಆದರೆ, ವಕೀಲರು ಕೇಳದೇ ಇದ್ದ ಕಾರಣ ನಾನು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಕೀಲರಿಗೆ ಆರೋಪಿಯು ಯಾವಾಗ ಹಣವನ್ನು ನನ್ನಿಂದ ಪಡೆದಿರುತ್ತಾರೆ ಹಾಗೂ ಚೆಕ್ ಅನ್ನು ಅವರು ಯಾವಾಗ ನೀಡಿರುತ್ತಾರೆ ಹಾಗೂ ಹಣವನ್ನು ಯಾವ ರೂಪದಲ್ಲಿ ನೀಡಿರುತ್ತೇನೆ ಎನ್ನುವ ಬಗ್ಗೆ ತಿಳಿಸಿರುತ್ತೇನೆ. ನಾನು ಹಣವನ್ನು ಆರೋಪಿಗೆ ಯಾವ ರೂಪದಲ್ಲಿ ನೀಡಿರುತ್ತೇನೆ ಎನ್ನುವ ಬಗ್ಗೆ ನನ್ನ ವಕೀಲರಿಗೆ ತಿಳಿಸಿರುದಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಗೆ ಹಣವನ್ನು ನೀಡಲು ಆರ್ಥಿಕ ಶಕ್ತಿ ಇಲ್ಲದೇ ಇರುವುದು ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂದು ಹೇಳಿ ನನ್ನ ಅಕ್ಕನಿಂದ ರೂ.2,25,000/- ಹಣ ತೆಗೆದುಕೊಂಡಿದ್ದೆನು ಎಂದು, ರೂ.2,00,000/- ಹಣ ಮನೆ ಭೋಗ್ಯಕ್ಕೆ ಹಾಕಿದ ಹಣ ಹಾಗೂ ರೂ.75,000/- ನನ್ನಲ್ಲಿ ನಗದು ಇತ್ತು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮನೆಗೆ ಬಂದು ಸದರಿ ಹಣವನ್ನು ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿಯು ದಿಃ02.04.2025 ರಂದು ನನ್ನಿಂದ ಹಣವನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಆರೋಪಿ ಇಬ್ಬರೇ ಇದ್ದೆವು.

ಭೋಗ್ಯದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನ್ನ ಅಕ್ಕನಿಂದ ಹಣವನ್ನು ಪಡೆದುಕೊಂಡಿದ್ದ ಬಗ್ಗೆ ಆಕೆಯಿಂದ ಸಾಕ್ಷಿ ವಿಚಾರಣೆ ಮಾಡಿಸಬಹುದು. ಆರೋಪಿಯು ನನ್ನ ಬಳಿ ದಿಃ25.03.2025 ರಂದು

ಹಣವನ್ನು ಕೇಳಿರುತ್ತಾರೆ. ಆರೋಪಿಯು ದಿಃ25.03.2025 ರಿಂದ ನಂತರ ಸಾಕಷ್ಟು ಬಾರಿ ಹಣವನ್ನು ಕೇಳಿದ ಮೇಲೆ ನಾನು ದಿಃ02.04.2025 ರಂದು ಹಣವನ್ನು ನೀಡಿರುತ್ತೇನೆ. ನನ್ನ ಹಾಗೂ ಆರೋಪಿಯ ನಡುವೆ ಹಣದ ವ್ಯವಹಾರ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಹಣವನ್ನು ಪಡೆದುಕೊಂಡ ದಿನವೇ ಚೆಕ್ ಅನ್ನು ನೀಡಿರುತ್ತಾರೆ.

ಆರೋಪಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನುಡಿಯುತ್ತಾರೆ ಆರೋಪಿ 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಆರೋಪಿಯು ಚೆಕ್ ಅನ್ನು ಮೊದಲೇ ಬರೆದು ತಂದಿದ್ದರು. ನಿಪಿ-1 ಚೆಕ್ಕಿನ ಮೇಲೆ 5 ಲಕ್ಷ ಹಣದ ಬರವಣಿಗೆಯನ್ನು ಆರೋಪಿ ಮಾಡಿರುತ್ತಾರೆ. ಆರೋಪಿಯು ನನ್ನ ಬಳಿ 5 ಲಕ್ಷ ಹಣವನ್ನು ಕೇಳಿರುತ್ತಾರೆ. ಆರೋಪಿಯು ಹಣವನ್ನು ಪಡೆದುಕೊಳ್ಳಲು ನನ್ನ ಮನೆಗೆ ಬರುವ ಒಂದು ದಿನ ಮೊದಲು ಆರೋಪಿಗೆ ನಾನು ಹಣವನುನ ಅವರಿಗೆ ನೀಡುವ ಬಗ್ಗೆ ತಿಳಿಯಿತು. ನಿಪಿ-1 ರಲ್ಲಿ ಇರುವ ಸಹಿ ಮತ್ತು ಬರವಣಿಗೆಯ ಶಾಯಿಗಳು ಬೇರೆ ಬೇರೆ ಇರುತ್ತದೆ ಎಂದರೆ ಸಾಕ್ಷಿದಾರರು ಅದನ್ನು ಆರೋಪಿ ಬರುವಾಗಲೇ ಬರೆದು ತಂದಿದ್ದರು ಎಂದು ನುಡಿಯುತ್ತಾರೆ. ನಿಪಿ-1 ಚೆಕ್ಕಿನಲ್ಲಿ ನಾನೇ ಬರವಣಿಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕಿನಲ್ಲಿ ನಾನೇ ಬರವಣಿಗೆ ಮಾಡಿದ್ದು ಅದನ್ನು ಮರೆ ಮಾಚುವ ಸಲುವಾಗಿ ಆರೋಪಿಗೆ ಚೆಕ್ಕಿನಲ್ಲಿ ಬರವಣಿಗೆ ಮಾಡಿಕೊಂಡು ಬಂದಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯು ಬಟ್ಟೆ ವ್ಯಾಪಾರಕ್ಕಾಗಿ ನನ್ನಲ್ಲಿ ಹಣವನ್ನು ಸಾಲವಾಗಿ ಕೇಳಿದ್ದರು. ಬಟ್ಟೆ ವ್ಯಾಪಾರಕ್ಕಾಗಿ ಆರೋಪಿ ಹಣವನ್ನು ಕೇಳಿರುವ ಬಗ್ಗೆ ನನ್ನ ನೋಟೀಸ್ ನಲ್ಲಿ ಆಗಲೀ ನನ್ನ ದೂರಿನಲ್ಲಿ ಆಗಲೀ ತಿಳಿಸಲು ತೊಂದರೆ ಇರಲಿಲ್ಲ. ಆರೋಪಿಯು ಪ್ರತಿ ತಿಂಗಳು ಒಂದು ಲಕ್ಷ ರೂಪಾಯಿ ಮೌಲ್ಯದ 5 ಚೀಟಿಯನ್ನು ನನ್ನ ಬಳಿ ಹಾಕಿದ್ದರು ಎಂದರೆ ಸರಿಯಲ್ಲ. ಅದರಲ್ಲಿ 2 ಚೀಟಿಯ ಬಾಬ್ತು 2 ಲಕ್ಷ ರೂಪಾಯಿಯನ್ನು ಆರೋಪಿ ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಟಿಪ್ಪು ನಗರದಲ್ಲಿ ಅಂಗಡಿ ಇರುತ್ತದೆ ಎಂದರೆ ಸಾಕ್ಷಿದಾರರು ಟಿಪ್ಪುನಗರ, ಅಂಡೆಛತ್ರ ಹಾಗೂ ಬದ್ರಿಯಾದಲ್ಲಿ ಅಂಗಡಿ ಇರುತ್ತದೆ ಎಂದು ನುಡಿಯುತ್ತಾರೆ. ಟಿಪ್ಪುನಗರದಲ್ಲಿ ಆರೋಪಿಗೆ ಸೇರಿದ ಅಂಗಡಿಯಲ್ಲಿ ನಾನು ಕುಳಿತುಕೊಳ್ಳುತ್ತೇನೆ ಎಂದರೆ ಸರಿ. ಸದರಿ ಅಂಗಡಿಯಲ್ಲಿ ನಾನು ಮಾಡುವ ಬಟ್ಟೆ ವ್ಯಾಪಾರದ ಬಟ್ಟೆಗಳು ಆರೋಪಿಯು ತಂದು ಹಾಕಿರುವ ಬಟ್ಟೆಗಳು ಎಂದರೆ ಸರಿ. ಅದಕ್ಕೆ ಆರೋಪಿಯು ನನಗೆ ಪ್ರತಿ ತಿಂಗಳು ಸಂಬಳವನ್ನು ನೀಡುತ್ತಾರೆ ಎಂದರೆ ಸಾಕ್ಷಿದಾರರು ತಿಂಗಳಿಗೆ 5 ಸಾವಿರ ಸಂಬಳವನ್ನು ನೀಡುತ್ತಿದ್ದರು ಎಂದು ನುಡಿಯುತ್ತಾರೆ. ಚೀಟಿ ವ್ಯವಹಾರದ ಬಾಬ್ತು ಆರೋಪಿಯಿಂದ ನಾನು 2 ಚೆಕ್ಕುಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಆ ಪೈಕಿ ಒಂದು ಚೆಕ್ ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಹಣವನ್ನು ನಗದಾಗಿ ನೀಡುವಂತೆ ಕೇಳಿಕೊಂಡಿದ್ದರಿಂದ ಆರೋಪಿಗೆ ಹಣವನ್ನು ನಗದಲ್ಲಿ ನೀಡಿರುತ್ತೇನೆ. ಆರೋಪಿಗೆ 500 ರೂಪಾಯಿ ಮುಖಬೆಲೆಯ ಒಂದು ಸಾವಿರ ನೋಟುಗಳ 10 ಬಂಡಲ್ ಗಳನ್ನು

ನೀಡಿರುತ್ತೇನೆ. ಆರೋಪಿಯು ನನಗೆ ಕೆಲಸವನ್ನು ನೀಡಿದ್ದು ನಾನು ಅವರು ನೀಡುವ ಸಂಬಳದಲ್ಲಿ ಜೀವನ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಪಾಸ್ ಬುಕ್ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ನಾನು ಆರೋಪಿಯು ಚೀಟಿಯ ಭದ್ರತೆಗಾಗಿ ನೀಡಿರುವ ಚೆಕ್ ಅನ್ನು ಹಾಜರುಪಡಿಸಿ ಒಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ನೋಟೀಸ್ ಕಳುಹಿಸಿದ ನಂತರ ಆರೋಪಿ ನನ್ನ ಬಳಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಬಂದು ಚೀಟಿಯ ಭದ್ರತೆಗಾಗಿ ನೀಡಿದ ಚೆಕ್ಕಿನ ಬಗ್ಗೆ ಪ್ರಶ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಅವರ ಬಳಿ ಕೆಲಸ ಮಾಡುತ್ತಿದ್ದು ಸದರಿ ಚೆಕ್ಕನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಿಲ್ಲ ಎಂದು ಭರವಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿ ನಾನು ನೀಡಿರುವ ನೋಟೀಸ್ ಗೆ ಉತ್ತರವನ್ನು ನೀಡಿರುವುದಿಲ್ಲ ಹಾಗೂ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

C.C.No.1636/2025
PW-1

ಎಸ್‌ಆರ್‌ಃ

C.C.No.1636/2025
PW-1